ನಾನೇ ಚಿತ್ರ ಬಿಡಿಸಿ, ಬ್ಲಾಕು ಮಾಡಿಸಿ ದುಡ್ಡುಹಾಕಿ ಪ್ರಕಟಿಸಿದುದು ನನಗೇ ಅಚ್ಚರಿಯ ವಿಷಯವಾಗಿದೆ. ಆ ಸಮಯದಲ್ಲಿ ಈ ಬಾಲ್ಯದ ಲೋಕ ಯಾಕೆ ಇದ್ದಕಿದ್ದಹಾಗೆ ನನ್ನನ್ನು ಸೆಳೆಯಿತು ಅಂತನ್ನುವುದು ಒಗಟೇ. ನಾನೇನು ಶಿಕ್ಷಕನಾಗಿ ಪದೇಪದೆ ಮಕ್ಕಳ ಒಡನಾಟ ಪಡೆದುಕೊಂಡವನಲ್ಲ. ನನ್ನ ಬಾಲ್ಯದ ದಿನಗಳು, ಶಾಲೆ, ಗೆಳೆಯರು, ಅಜ್ಜಿಯ ಮನೆ, ಹೀಗೇ ಏನೇನೋ ನನ್ನೊಳಗೆ ಗೂಡುಕಟ್ಟಿಕೊಂಡು ಬಿಡಲಾರದಂತೆ ಬಚ್ಚಿಟ್ಟುಕೊಂಡಿವೆ ಅಂದುಕೊಂಡಿದ್ದೇನೆ. ನನ್ನ ಬರವಣಿಗೆಯೆಲ್ಲ ಪ್ರತಿಸಲ ಈ ಬಾಲ್ಯವನ್ನ ಹೊತ್ತೇ ಬರುತ್ತಿದೆ. ನನಗೆ ಮಗಳಾಗಿ ಪುಟ್ಟ ಮಗು ಮನೆಗೆ ಬಂದಾಗ ಅದೊಂದೇ ಅನುಭವ. ಅದ್ಯಾಕೊ ಗೊತ್ತಿಲ್ಲ, ಪದೇಪದೇ ಪುಟ್ಟ ಪುಟ್ಟ ಕೈಕಾಲುಗಳು, ಮೃದು ತ್ವಚೆ, ಮುಗ್ಧ ಮುಖ ನನ್ನನ್ನು ಮತ್ತೆಮತ್ತೆ ತಿರುಗಿ ನೋಡುವಂತೆ ಮಾಡಿದೆ. ಈ ವಯಸ್ಸಿನಲ್ಲೂ ಬದುಕಿಗೆ ಅದೇನೋ ನಿರಾಳತೆಯನ್ನು ನೀಡುತ್ತಿದೆ ಅನಿಸುತ್ತಿದೆ. ನಾನು ಬರೆಯುತ್ತ ಬಂದುದು ನನ್ನೊಳಗಿನ ನನಗೇ. ಅದೆಲ್ಲವನ್ನ ಶಬ್ದಗಳಲ್ಲಿ ಹೇಳಲು ಅಗದು.

◆ **ಮಕ್ಕಳ ಕೈಗೆ ಪುಸ್ತಕ ಕೊಡಬೇಕು ಎನ್ನುವುದು ವಾಡಿಕೆಯ ಮಾತು. ಇಂದಿನ ಎಳೆಯರ ಕೈಗೆ ಮೊಬೈಲ್ ಕೊಟ್ಟದ್ದೇವೆ. ಈ ಮೊಬೈಲ್ ವಿಶ್ವವನ್ನು ಕಾಣಿಸುವ ಕನ್ನಡಿಯೂ ಕಲಿಕೆಯ ಸಲಕರಣೆಯೂ ಆಗಿದೆ. ಇಂಥ ಸಂದರ್ಭದಲ್ಲಿ, ಪುಸ್ತಕವೊಂದು ತನ್ನ ಆಕರ್ಷಣೆ ಉಳಿಸಿಕೊಳ್ಳುವುದು ಹೇಗೆ? ಮಕ್ಕಳಿಗಾಗಿ ಬರೆಯುವ ಲೇಖಕರು ಈಗ ಮೊಬೈಲ್‌ನೊಂದಿಗೆ ಸ್ಪರ್ಧಿಸುತ್ತಿದ್ದಾರೆ ಅಥವಾ ಸ್ಪರ್ಧಿಸಬೇಕು ಎಂದು ನಿಮಗೆ ಅನ್ನಿಸುತ್ತದೆಯೆ?**

ಮೊಬೈಲ್ ಈಗ ಅನಿವಾರ್ಯದ, ಹಾಗೆಯೇ ವ್ಯಸನದ ಸಾಧನವೂ ಆಗಿ ಕೂತಿದೆ. ದೊಡ್ಡವರೇ ಇದಕ್ಕೆ ಸಾಕಷ್ಟು ಬಲಿಯಾಗಿ ಆಗಿದೆ. ಇನ್ನು ಕುತೂಹಲದ ಕಣ್ಣಿನ ಮಕ್ಕಳಿಗೆ ಏನನ್ನುವುದು. ಮಕ್ಕಳಾಗಲಿ, ದೊಡ್ಡವರಾಗಲಿ ಓದಿನಂಥ, ಕಲೆಯ ಯಾವುದೇ ಪ್ರಕಾರದ ಅಭಿಲಾಷೆಗಾಗಿ ಮೊಬೈಲಿನಿಂದ ಕೊಂಚ ದೂರ ಇರುವುದೇ ವಾಸಿ. ಆದರೆ ಮೊಬೈಲ್ ಸಾಧ್ಯತೆಗಳನ್ನೂ ಕಡೆಗಣಿಸುವಂತಿಲ್ಲವಲ್ಲ. ದೂರದೂರದ ಭಾಷೆಗಳ ಕೃತಿಗಳು, ಮಾಹಿತಿಗಳು ನಮಗೆ ತಟಕ್ಕನೆ ಸಿಗುವುದು ಈ ಮೊಬೈಲಿನಿಂದಲೇ. ಈಗೆಲ್ಲ ಕಿಂಡರ್ ಪುಸ್ತಕ ಸಂಗ್ರಹಗಳು ಸಿಗತೊಡಗಿವೆ. ಈಗೀಗ ಕೆಲವು 'ನೋಡು ಕೃತಿ'ಗಳನ್ನು ಲಭ್ಯವಾಗಿಸಿಕೊಳ್ಳಲು ಮೊಬೈಲ್ ಅಗತ್ಯವೇ ಇದೆ. ಹಾಗಾಗಿ ಇದನ್ನು ಮಿತಿಯೆಂದುಕೊಳ್ಳದೆ ಸಾಧ್ಯತೆಯಾಗಿ ಮಾರ್ಪಡಿಸಿಕೊಳ್ಳುವ ಜರೂರಿದೆ.

◆ **ಕನ್ನಡದ ಜೊತೆಗೆ ಭಾರತದ ಇತರ ಭಾಷೆಗಳಲ್ಲಿನ ಮಕ್ಕಳ ಸಾಹಿತ್ಯ ಕ್ಷೇತ್ರದ ಚಟುವಟಿಕೆಗಳನ್ನು ಬಲ್ಲವರು ನೀವು. ಬೇರೆ ಬೇರೆ ದೇಶಗಳಲ್ಲಿನ ಮಕ್ಕಳ ಸಾಹಿತ್ಯದಲ್ಲಿನ ಬೆಳವಣಿಗೆಗಳ ಬಗೆಗೂ ಬಿಡುಗಣ್ಣಾದವರು. ಈ ಅನುಭವದ ಹಿನ್ನೆಲೆಯಲ್ಲಿ, ಕನ್ನಡದಲ್ಲಿನ ಮಕ್ಕಳ ಸಾಹಿತ್ಯವನ್ನು ಯಾವ ರೀತಿ ಗುರ್ತಿಸುತ್ತೀರಿ? ಆಗಬೇಕಾದುದೇನು? ಕೊರತೆಗಳೇನು? ಕನ್ನಡದಲ್ಲಿನ ಮಕ್ಕಳ ಸಾಹಿತ್ಯದ ಗುಣಮಟ್ಟದ ಬಗ್ಗೆ ನಿಮಗೆ ತೃಪ್ತಿಯಿದೆಯೆ?**

ನಮ್ಮ ದೌರ್ಭಾಗ್ಯವೆಂದರೆ ನಮ್ಮ ಪಕ್ಕದ ರಾಜ್ಯದಲ್ಲಿ ಏನಾಗುತ್ತಿದೆ ಎಂಬುದು ನಮಗೆ ಗೊತ್ತೇ ಆಗುವುದಿಲ್ಲ. ಇದು ವಯಸ್ಕರ ಸಾಹಿತ್ಯಕ್ಕೆ ಸಂಬಂಧಿಸಿದ ಹಾಗೆಯೂ ನಿಜವಾದ ಮಾತು. ಆದರೆ ಸಾಕಷ್ಟು ವಿಪುಲವಾಗಿ ಬೆಳೆದಿರುವ ದೊಡ್ಡವರ ಸಾಹಿತ್ಯಕ್ಕೆ ಈ ಬಗೆಯ ಆಸರೆ ತೀರಾ ಅನಿವಾರ್ಯದ್ದಾಗಿ ಕಾಣುವುದಿಲ್ಲ. ಆದರೆ ತೀರಾ ಬಡವಾಗಿರುವ ಮಕ್ಕಳ ಸಾಹಿತ್ಯಕ್ಕೆ ಈ ಬಗೆಯ ವಿಭಿನ್ನ ಓದು, ಅಭ್ಯಾಸ ಅಗತ್ಯದ್ದಾಗಿದೆ. ಆ ಕುರಿತು ನಾನು ಎಷ್ಟೊಂದು ಪ್ರಯತ್ನಪಡುತ್ತಿದ್ದೇನೆ. ಹಿಂದಿ, ಇಂಗ್ಲಿಷ್ ಭಾಷೆಗಳ ಸಂಪರ್ಕದಿಂದ ಮಾತ್ರ ನನಗೆ ಈ ದಾರಿಗಳು ತೆರೆಯುವುದು. ಸಾಧ್ಯವಾದಷ್ಟೂ ಇತರೆಲ್ಲ ಭಾಷೆಗಳ ಬಗೆಗೆ ನನ್ನ ಕಣ್ಣು ತೆರೆದುಕೊಂಡೇ ಇರುತ್ತದೆ. ಎನ್.ಬಿ.ಟಿ, ಸಿ.ಬಿ.ಟಿ. ಒಂದಿಷ್ಟೆಲ್ಲ ಇಂಥದಕ್ಕೆ ಆಸರೆಯಾಗುತ್ತ ಬಂದಿವೆ. ಈಗ ಅಲ್ಲಿಯೂ ಹೆಚ್ಚು ಕೆಲಸ ಆಗುತ್ತಿಲ್ಲ. ಮರಾಠಿ, ಬಂಗಾಲಿ, ಮಲಯಾಳಿ, ತಮಿಳು, ತೆಲುಗು ಹೀಗೆ ಸಾಧ್ಯವಾದ ಲೇಖಕರ ಕೃತಿಗಳನ್ನು ಓದಲು ಸಾಧ್ಯವಾಗಿದೆ. ವಿದೇಶಗಳ ಕೃತಿಗಳೇ ಬಹು ಸುಲಭವಾಗಿ ಈಗ ದೊರಕುತ್ತಿವೆ. ಹಾಗೆ ಇಂಗ್ಲಿಷ್ ಮುಖಾಂತರವಾದರೂ ಚೈನಿ, ಐರ್ಲೆಂಡ್, ಜರ್ಮನಿ ಹೀಗೆ ಸಾಧ್ಯವಾದಷ್ಟೂ ಓದು ಆಗಿದೆ. ರಷಿಯನ್ ಸಾಹಿತ್ಯ ಈಗ ಮೊದಲಿನಂತೆ ತಲುಪುತ್ತಿಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ನೋಡುವಾಗ ಕನ್ನಡದ